Office of the Assistant Controller,
Local Audit Circle,
Omkar Building, 1st Floor,
Omkareswara Temple road,
Madikeri-571201,
Phone No.08272-229093
E mail Address:aclackodagu@gmail.com

ಸಹಾಯಕ ನಿಯಂತ್ರಕರ ಕಛೇರಿ,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ಓಂಕಾರ್ ಬಿಲ್ಡಿಂಗ್, 1ನೇ ಮಹಡಿ,
ಓಂಕಾರೇಶ್ವರ ದೇವಸ್ಥಾನದ ರಸ್ತೆ,
ಮಡಿಕೇರಿ–571201,
ದೂರವಾಣಿ ಸಂಖ್ಯೆ:08272–229093
ಇಮೇಲ್ ವಿಳಾಸ: aclackodagu@gmail.com

ಸಂಖ್ಯೆ:–ಸ್ಥ.ಲೆ.ಪ.ವ.ಮ:ಎಆರ್ಎಂ;1:12–13 /387

ದಿನಾಂಕ: 19-12-2012

ಇವರಿಗೆ,

ಆಯುಕ್ತರು
ನಗರಾಭಿವೃದ್ಧಿ, ಪ್ರಾಧೀಕಾರ
ಮಡಿಕೇರಿ.

ವಿಷಯ:– ನಗರಾಭಿವೃದ್ಧಿ ಪ್ರಾಧಿಕಾರ ಮಡಿಕೇರಿಯ 2011–12ನೇ ಸಾಲಿನ ಲೆಕ್ಕ ತಪಾಸಣೆಯ ವರದಿಯನ್ನು ಕಳುಹಿಸುವ ಬಗ್ಗೆ.

*************

ನಗರಾಭಿವೃದ್ಧಿ ಪ್ರಾಧಿಕಾರ ಮಡಿಕೇರಿ 2011–12ನೇ ಸಾಲಿನ ಲೆಕ್ಕ ತಪಾಸಣೆಯನ್ನು ನಗರಾಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1987ರ ಪ್ರಕರಣ 48(2)ಅನುಸಾರ ಕೈಗೊಂಡು ಲೆಕ್ಕ ತಪಾಸಣಾ ವರದಿಯನ್ನು ತಮಗೆ ಕಳುಹಿಸಲಾಗಿದೆ. ಈ ವರದಿಯನ್ನ ಪ್ರಾಧಿಕಾರದ ಮುಂದಿಟ್ಟು ಕರ್ನಾಟಕ ನಗರಾಭಿವೃದ್ಧಿ ಪ್ರಾಧೀಕಾರ ನಿಯಮಾವಳಿ 1987ರ ಉಪನಿಯಮ 48(6) ರೀತ್ಯಾ ಕ್ರಮ ಕೈಗೊಂಡು ವರದಿಯಲ್ಲಿ ಕಾಣಿಸಿದ ನ್ಯೂನತೆಗಳ ಬಗ್ಗೆ ಸೂಕ್ತ ಉತ್ತರವನ್ನು ಈ ವರದಿ ತಲುಪಿದ ಒಂದು ತಿಂಗಳೊಳಗೆ ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಿಕೊಡುವುದು.

ವರದಿ ತಲುಪಿರುವುದಕ್ಕೆ ಸ್ವೀಕೃತಿಯನ್ನು ಕಳುಹಿಸಿಕೊಡುವುದು.

ತಮ್ಮ ವಿಶ್ವಾಸಿ,

ಸಹಾಯಕ ನಿಯಂತ್ರಕರು,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ಮಡಿಕೇರಿ.

ಪ್ರತಿಯನ್ನು:–

1. ಕರ್ನಾಟಕ ಸರ್ಕಾರದ ಸಚಿವಾಲಯ ನಗರಾಭಿವೃದ್ಧಿ ಇಲಾಖೆ, ಮಂಡಳಿ ವಿವಿದೋದ್ದೇಶ ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಮಾನ್ಯ ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಬೆಂಗಳೂರು.
3. ಕಾರ್ಯದರ್ಶಿ, II ಕರ್ನಾಟಕ ಸರ್ಕಾರ, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.

**ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ 2011-12 ನೇ ಸಾಲಿನ ಲೆಕ್ಕ ತನಿಖಾ ವರದಿಯಲ್ಲಿನ ನ್ಯೂನತೆಗಳ ವಿವರ**

| ಕ್ರ.ಸಂ. | ಕಂಡಿಕೆ ಸಂಖ್ಯೆ | ನ್ಯೂನತೆಗಳ ವಿವರ | ಆಕ್ಷೇಪಣೆ ವಿವರ | ವಸೂಲಿ ವಿವರ |
|---|---|---|---|---|
| 1 | 15 | ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆಯದೆ ವೇತನ ಪಾವತಿ | 128364 | ------ |
| | | ಜುಮ್ಲಾ:- | 128364 | ------- |

**<u>ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ 2011-12ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ</u>**

**1. ಪೀಠಿಕೆ:**

ನಗರಾಭಿವೃದ್ಧಿ ಪ್ರಾಧಿಕಾರ ಮಡಿಕೇರಿ 2011-12ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ 48(2)ರಂತೆ ಕೈಗೊಂಡು ವರದಿಯನ್ನು ಈ ಕೆಳಕಂಡಂತೆ ನೀಡಲಾಗಿದೆ. ವರದಿಯ ಬಗ್ಗೆ 1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ನಿಯಮ 49(5)(6) ರ ಪ್ರಕಾರ ಕೈಗೊಳ್ಳುವಂತೆ ತಿಳಿಸಿದೆ.

**1) ಸಾಮಾನ್ಯ ಮಾಹಿತಿ:**

| | | |
|---|---|---|
| 1. ಲೆಕ್ಕ ತನಿಖೆಯ ಸಂಸ್ಥೆಯ ಹೆಸರು | : | ಮಡಿಕೇರಿ, ನಗರಾಭಿವೃದ್ಧಿ ಪ್ರಾಧಿಕಾರ |
| 2. ಲೆಕ್ಕ ಪರಿಶೋಧನಾ ಅವಧಿ | : | 01-04-2011 ರಿಂದ 31-03-2012 |
| 3. ಲೆಕ್ಕ ಪರಿಶೋಧಕರ ಹೆಸರು | : | 1. ಶ್ರೀ ಸಿ.ಜೆ. ನಟರಾಜ್ ಲೆಕ್ಕ ಪರಿಶೋಧಕರು<br>2. ಶ್ರೀ. ಹೆಚ್.ಎನ್.ರಾಜಶೇಖರ್, ಲೆಕ್ಕ ಪರಿಶೋಧಕರು |
| 4. ಲೆಕ್ಕ ತನಿಖಾ ಆರಂಭ ದಿನಾಂಕ | : | 11-06-2012 |
| 5. ಲೆಕ್ಕ ತನಿಖಾ ಮುಕ್ತಾಯ ದಿನಾಂಕ | : | 12-06-2012 |
| 6. ಉಪಯೋಗಿಸಿದ ಮಾನವ ದಿನಗಳು | : | 4 ಮಾನವ ದಿನಗಳು |
| 7. ಪುನರ್ ಪರಿಶೀಲನಾ ಅಧಿಕಾರಿ | : | ಅಪರ ನಿಯಂತ್ರಕರು ರಾಜ್ಯ ಲೆಕ್ಕ ಪತ್ರ ಇಲಾಖೆ ಬೆಂಗಳೂರು. |
| 8. ಪುನರ್ ಪರಿಶೀಲನಾ ದಿನಾಂಕ | : | |

**2. ಆಡಳಿತ ವರ್ಗದ ವಿವರ:**

| | | | |
|---|---|---|---|
| 1. <u>ಅಧ್ಯಕ್ಷರು:</u> | ಶ್ರೀ. ಸಜಿಲ್ ಕೃಷ್ಣ ಪಿ. | : | 1-4-2011ರಿಂದ 31-3-2012 |
| 2. <u>ಆಯುಕ್ತರು:</u> | ಶ್ರೀ. ಅಸಾದ್ ಉರ್ ರೆಹೆಮಾನ್ ಷರೀಫ್ | : | 1-4-2011 ರಿಂದ 31-3-2-2012 |

### 3. ಹಿಂದಿನ ಸಾಲಿನ ಲೆಕ್ಕ ಪರಿಶೋಧನಾ ವರದಿಗಳ ಬಗ್ಗೆ:

ಹಿಂದಿನ ಸಾಲಿನ ವರದಿಯ ಬಗ್ಗೆ ಅನುಸರಣಾ ವರದಿಯನ್ನು 1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ನಿಯಮ 48(5)(6) ರಂತೆ ಬರೆದು ಸಂಬಂಧಿಸಿದ ಪ್ರಾಧಿಕಾರಕ್ಕೆ ಕಳುಹಿಸಿರುವುದಿಲ್ಲ. ಅನುಸರಣಾ ರಿಜಿಸ್ಟರ್ ಬರೆದು ಲೆಕ್ಕ ತಪಾಸಣೆಗೆ ಹಾಜರುಪಡಿಸಿಲ್ಲ. ಈ ಬಗ್ಗೆ ಕ್ರಮ ಅಗತ್ಯ.

ಸಮರ್ಪಕ ಉತ್ತರಗಳನ್ನು ಬರೆದು ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಿ ಆಕ್ಷೇಪಣೆ ತೀರುವಳಿಗೆ ಕ್ರಮ ವಹಿಸುವುದು ಹಾಗೂ ಲೆಕ್ಕ ತಪಾಸಣಾ ಅನುಸರಣಾ ವರದಿಯನ್ನು ರಿಜಿಸ್ಟರ್‌ನಲ್ಲಿ ಬರೆಯಲು ಸೂಚಿಸಿದೆ.

ದಿನಾಂಕ: 31-03-2012ರ ಅಂತ್ಯಕ್ಕೆ ಈ ಕೆಳಗಿನಂತೆ ಆಕ್ಷೇಪಣೆಗಳು ಬಾಕಿ ಉಳಿದಿರುತ್ತದೆ.

| ಕ್ರ.ಸಂ. | ವರ್ಷ | ಕಂಡಿಕೆ | ಆಕ್ಷೇಪಣೆ ಮೊತ್ತ | ವಸೂಲಿಗೆ ಸೂಚಿಸಿದ ಮೊತ್ತ |
|---|---|---|---|---|
| 1 | 1987-88 | ---- | 1295 | ---- |
| 2 | 88-89 | 9 | 5639 | 10981 |
| 3 | 89-90 | 10 | 17373 | 6103 |
| 4 | 90-91 | 6 | 86397 | 4320 |
| 5 | 91-92 | 6 | 74138 | 566 |
| 6 | 92-93 | 7 | 80966 | 2770 |
| 7 | 93-94 | 2 | 7069 | 480 |
| 8 | 94-95 | 2 | 1595 | 531 |
| 9 | 95-96 | 5 | 82787 | 5684 |
| 10 | 96-97 | 4 | 171786 | ---- |
| 11 | 97-98 | 4 | 164155 | ---- |
| 12 | 98-99 | 4 | 164158 | 396 |
| 13 | 99-2000 | 2 | 171700 | ---- |
| 14 | 2000-01 | 5 | 128403 | ---- |
| 15 | 2001-02 | 3 | 272100 | ---- |
| 16 | 2002-03 | 6 | 339875 | ---- |
| 17 | 2003-04 | 4 | 558457 | ---- |
| 18 | 2004-05 | 1 | 61440 | ---- |
| 19 | 2006-07 | 1 | 67140 | ---- |
| 20 | 2007-08 | 1 | 84830 | ---- |
| 21 | 2008-09 | 1 | 106028 | |
| 22 | 2009-10 | ---- | 102646 | ------ |
| 23 | 2010-11 | 1 | 114712 | ----------- |
| ಜುಮ್ಲಾ | | 83 | 714289 | 31813 |
| 2011-12ರ ಸೇರ್ಪಡೆ | | 1 | 128364 | --------- |
| ಜುಮ್ಲಾ | | 84 | 842653 | 31813 |
| 2011-12ರ ತೀರುವಳಿ | | ------- | ---------- | --------- |
| ಅಂತಿಮ ಶಿಲ್ಕು | | 84 | 842653 | 31813 |

## 4. ವಾರ್ಷಿಕ ಲೆಕ್ಕಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿದ ಬಗ್ಗೆ:

ಅನುಮೋದಿತ 2011-12ರ ಸಾಲಿನ ಲೆಕ್ಕ ಪತ್ರಗಳನ್ನು ದಿನಾಂಕ:20-5-2011ರಂದು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿದ್ದಾರೆ.

## 5. ಆಯ-ವ್ಯಯದ ಬಗ್ಗೆ:

2011-12ನೇ ಸಾಲಿನ ಆಯ-ವ್ಯಯವನ್ನು ದಿನಾಂಕ:04-08-2011ರಂದು ನಡೆದ ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯ ನಡಾವಳಿ ಸಂಖೆ-3ರಲ್ಲಿ ಅಂಗೀಕರಿಸಿ ಅನುಮೋದನೆಗಾಗಿ ಜಿಲ್ಲಾಧಿಕಾರಿ ಮಡಿಕೇರಿರವರಿಗೆ ಕಳುಹಿಸಲಾಗಿದ್ದು ಜಿಲ್ಲಾಧಿಕಾರಿಗಳ ಕಛೇರಿ ಪತ್ರ ಸಂಖ್ಯೆ: ಡಿಯುಡಿಸಿ/125/2011-12 ದಿನಾಂಕ: 8-8-2011ರಂದು ಮಂಜೂರಾತಿ ನೀಡಲಾಗಿದೆ. ನಿಯಮ-43ರಂತೆ ಫೆಬ್ರವರಿ ಮಾಹೆಯ ಒಂದನೇ ತಾರೀಖಿನ ಒಳಗೆ ಆಯ-ವ್ಯಯಕ್ಕೆ ಮಂಜೂರಾತಿ ಪಡೆಯಬೇಕಾಗಿದ್ದು ಬಹಳ ವಿಳಂಬವಾಗಿ ಆಯ-ವ್ಯಯಕ್ಕೆ ಮಂಜೂರಾತಿ ಪಡೆಯಲಾಗಿದೆ. ಸಕಾಲದಲ್ಲಿ ಆಯ-ವ್ಯಯಕ್ಕೆ ಮಂಜೂರಾತಿ ಪಡೆಯಲು ಕ್ರಮ ಅಗತ್ಯ.

| | ಜಮಾ | ಖರ್ಚು |
|---|---|---|
| ನಿರೀಕ್ಷಿತ | 4260000 | 7550000 |
| ವಾಸ್ತವಿಕ | 12242327 | 11714793 |

2011-12ರ ಸಾಲಿಗೆ ವಾಸ್ತವಿಕ ಜಮಾ ಮತ್ತು ವೆಚ್ಚ ನಿರೀಕ್ಷಿತ ಜಮಾ ಮತ್ತು ಖರ್ಚಿಗಿಂತ ಕ್ರಮವಾಗಿ ರೂ. 7982327.00 ಕಡಿಮೆಯಾಗಿದೆ ಮತ್ತು ರೂ.4164793.00 ಹೆಚ್ಚಾಗಿರುತ್ತದೆ. ಇನ್ನು ಮುಂದೆ ಆಯವ್ಯಯ ತಯಾರಿಸುವಾಗ ನಿರೀಕ್ಷಿತ ಜಮಾ ಮತ್ತು ಖರ್ಚು ವಾಸ್ತವಿಕ ಜಮಾ ಮತ್ತು ಖರ್ಚಿಗೆ ಸಮೀಪವಾಗಿರುವಂತೆ ಕ್ರಮ ವಹಿಸಲು ಸೂಚಿಸಿದೆ.

## 6. ಆರ್ಥಿಕ ಪರಿಸ್ಥಿತಿ:

ಇಂಡಿಯನ್ ಬ್ಯಾಂಕ್ ಖಾತೆ ಸಂಖ್ಯೆ: 538667417 ರಲ್ಲಿ 2011-12ರ ಈ ಸಂಸ್ಥೆ ನಡೆಸಿರುವ ಆರ್ಥಿಕ ವ್ಯವಹಾರ ಈ ಕೆಳಕಂಡಂತಿದೆ.

| | |
|---|---|
| ಆರಂಭ ಶಿಲ್ಕು | 724104 |
| 2011-12ರ ಜಮಾ | 12804964 |
| **ಜುಮ್ಲಾ** | **13529068** |
| 2011-12ರ ಖರ್ಚು | 12271404 |
| **ಅಂತಿಮ ಶಿಲ್ಕು** | 1257664 |
| ಬ್ಯಾಂಕ್ ಖಾತೆಯಂತೆ | 1529082 |
| ವ್ಯತ್ಯಾಸ | 271418 |

**ವ್ಯತ್ಯಾಸಕ್ಕೆ ವಿವರ:**

ನಗದಾಗದ ಚೆಕ್ ಸಂಖ್ಯೆ: 724818 ದಿನಾಂಕ: 27-03-2012 ರೂ.625/-

030436 ದಿನಾಂಕ:29-03-12 ರೂ.270793/-

---------------

ಒಟ್ಟು ರೂ.271418/-

---------------

**7. ಜಮಾ ಮತ್ತು ಖರ್ಚಿನ ವರ್ಗೀಕೃತ ರಿಜಿಸ್ಟರ್ ಬಗ್ಗೆ:**

2011-12ರ ಸಾಲಿಗೆ ಜಮಾ ಮತ್ತು ಖರ್ಚಿನ ರಿಜಿಸ್ಟರ್ ಬರೆಯಲಾಗಿದೆ. ಆದರೆ ನಿಗದಿತ ನಮೂನೆಯಲ್ಲಿ ನಿರ್ವಹಿಸಲಾಗಿಲ್ಲ. ಈ ಬಗ್ಗೆ ಕ್ರಮ ವಹಿಸುವುದು.

ಸಂಸ್ಥೆಯವರು ನೀಡಿರುವಂತೆ ಅನುಬಂಧ - 1ರಲ್ಲಿ ಜಮಾ-ಖರ್ಚಿನ ವಿವರ ನೀಡಲಾಗಿದೆ.

**8. ಆಸ್ತಿ ಮತ್ತು ಹೊಣೆಗಾರಿಕೆ ಬಗ್ಗೆ:**

ದಿನಾಂಕ: 31-3-2012ರ ಅಂತ್ಯಕ್ಕೆ ಆಸ್ತಿ ಮತ್ತು ಹೊಣೆಗಾರಿಕೆ ವಿವರ ಈ ಕೆಳಗಿನಂತಿದೆ.

| ಆಸ್ತಿ | ಹೊಣೆಗಾರಿಕೆ |
|---|---|
| 1) ಯಾವ ಆಸ್ತಿಗಳಿರುವುದಿಲ್ಲ. | ಹೊಣೆಗಾರಿಕೆ ಇಲ್ಲ. |

**9. ಹೊಸ ಬಡಾವಣೆ ನಿರ್ಮಾಣದ ಬಗ್ಗೆ:**

ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರ ಹೊಸ ಬಡಾವಣೆ ನಿರ್ಮಾಣ ಕಾರ್ಯವನ್ನು ಕೈಗೊಂಡಿರುವ ಬಗ್ಗೆ ಲೆಕ್ಕ ತಪಾಸಣೆ ವೇಳೆಯಲ್ಲಿ ಪರಿಶೀಲಿಸಲಾಗಿ ಬಡಾವಣೆಯ ನಿರ್ಮಾಣ ಕಾರ್ಯವನ್ನು ಕೈಗೊಂಡಿರುವುದಿಲ್ಲ.

**10. ಮುಂಗಡಗಳು:**

2011-12ನೇ ಸಾಲಿಗೆ ಮುಂಗಡ ರಿಜಿಸ್ಟರ್ ಬರೆಯಲಾಗಿದ್ದು ವಿವರಗಳು ಈ ಕೆಳಗಿನಂತಿದೆ.

| | |
|---|---|
| ಆರಂಭ ಶಿಲ್ಕು | 131000 |
| 2011-12ರ ಪಾವತಿ | --------- |
| **ಜುಮ್ಲಾ** | **131000** |
| 2011-12ರ ಹೊಂದಾಣಿಕೆ | 131000 |
| **ಅಂತಿಮ ಶಿಲ್ಕು** | --------- |

ಬಾಕಿ ಇರುವ ಮುಂಗಡ ವಸೂಲಿ ಅಥವಾ ಹೊಂದಾಣಿಕೆಗೆ ಕೂಡಲೇ ಕ್ರಮ ಅಗತ್ಯ. ಇಲ್ಲವಾದಲ್ಲಿ ಈ ಮುಂಗಡವನ್ನು ಬಡ್ಡಿ ಸಮೇತ ಈ ಪಾವತಿಗೆ ಕಾರ್ಯಕರ್ತರಾದ ಆಯುಕ್ತರುಗಳಿಂದ ವಸೂಲಿಗೆ ಕ್ರಮ ವಹಿಸುವುದು.

**11. ಹೂಡಿಕೆ ರಿಜಿಸ್ಟರ್:**

ಸದರಿ ಸಂಸ್ಥೆಯು 2011-12ನೇ ಸಾಲಿಗೆ ಹೂಡಿಕೆ ವಹಿಯನ್ನು ನಿರ್ವಹಿಸಿ ಲೆಕ್ಕ ತನಿಖೆಗೆ ಹಾಜರುಪಡಿಸಿದ್ದಾರೆ. ವಿವರ ಈ ಕೆಳಗಿನಂತಿದೆ.

| | |
|---|---|
| ಆರಂಭ ಶಿಲ್ಕು | 9363545 |
| 2011-12ರ ಹೂಡಿಕೆ | 4012129 |
| **ಜುಮ್ಲಾ** | **13375674** |
| 2011-12ರ ನಗದೀಕರಣ | 4687705 |
| ಅಂತಿಮ ಶಿಲ್ಕು | 8687969 |

2011-12ನೇ ಸಾಲಿನ ಹೂಡಿಕೆ ವಿವರವನ್ನು ಅನುಬಂಧ- 2ರಲ್ಲಿ ನೀಡಲಾಗಿದೆ.

## 12. ಅಕ್ರಮ ಸಕ್ರಮ ಖಾತೆ ತೆರೆದಿರುವ ಬಗ್ಗೆ:

ಆದೇಶ ಸಂಖ್ಯೆ-ಯು.ಡಿ.ಡಿ./2/ಹಿ.ಇ.ಎಮ್.ಆರ್/ಮು.ಪಿ.ಆರ್.ಐ/2007 ಬೆಂಗಳೂರು. ದಿನಾಂಕ:14-8-07ರಂತೆ ಅಕ್ರಮ ನಿವೇಶನ ಹಾಗೂ ಕಟ್ಟಡಗಳ ಸಕ್ರಮೀಕರಣ ಈ ಬಾಬ್ತಿನಿಂದ ಬಂದ ಹಣವನ್ನು ಇಂಡಿಯನ್ ಬ್ಯಾಂಕ್ ಖಾತೆ ಸಂಖ್ಯೆ:751985719 ರಲ್ಲಿ ವ್ಯವಹರಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

| | |
|---|---|
| ಆರಂಭ ಶಿಲ್ಕು | **206805** |
| 2011-12ರ ಜಮಾ | 8089 |
| **ಜುಮ್ಲಾ** | **214894** |
| 2011-12ರ ಖರ್ಚು | --------- |
| **ಅಂತಿಮ ಶಿಲ್ಕು** | **214894** |

## 13. ಲೆಕ್ಕ ಪರಿಶೋಧನಾ ಶುಲ್ಕದ ಬಗ್ಗೆ:

ಲೆಕ್ಕ ಪರಿಶೋಧನಾ ಶುಲ್ಕದ ವಿವರ ಈ ಕೆಳಕಂಡಂತಿದೆ.

1) ಒಟ್ಟು ಜಮಾ - 8117259
ಕಳೆಯುವುದು ರೂ. - 00
2) ಒಟ್ಟು ಖರ್ಚು - 8259285
+ 16376544

ಲೆಕ್ಕ ತಪಾಸಣೆಯ ಶುಲ್ಕ ರೂ. 100.00 ಕ್ಕೆ ರೂ. 0.20 ಪೈಸೆಯಂತೆ ರೂ.32753.00 ಗಳಾಗಿದ್ದು ಲೆಕ್ಕ ತಪಾಸಣೆ ಶುಲ್ಕದ ಡಿ.ಸಿ.ಬಿ. ವಿವರ ಈ ಕೆಳಗಿನಂತಿದೆ.

| | |
|---|---|
| ಆರಂಭ ಶಿಲ್ಕು | 16139 |
| 2011-12ರ ಬೇಡಿಕೆ | 32753 |
| **ಜುಮ್ಲಾ** | **48892** |
| 2011-12 ಸರ್ಕಾರಕ್ಕೆ ಜಮಾ | 16139 |
| ಅಂತಿಮ ಶಿಲ್ಕು | 32753 |

ಸರ್ಕಾರಕ್ಕೆ ಪಾವತಿಸಲು ಬಾಕಿ ಇರುವ ಲೆಕ್ಕ ತನಿಖಾ ಶುಲ್ಕವನ್ನು ಲೆಕ್ಕ ಶೀರ್ಷಿಕೆ 0070-60-110-01ಕ್ಕೆ ಜಮಾ ಮಾಡಲು ಸೂಚಿಸಿದೆ.

## 14. ಜಮೆಗಳ ಪರಿಶೀಲನೆಯ ಬಗ್ಗೆ:

ರಶೀದಿ ಪುಸ್ತಕಗಳ ದಾಸ್ತಾನು ವಿವರ:

2011-12ನೇ ಸಾಲಿಗೆ ರಶೀದಿ ಪುಸ್ತಕಗಳ ದಾಸ್ತಾನು ರಿಜಿಸ್ಟರ್ ನಿರ್ವಹಿಸಲಾಗಿದೆ. ದಿನಾಂಕ:11-06-2012ರಂದು ರಶೀದಿ ಪುಸ್ತಕಗಳನ್ನು ಭೌತಿಕವಾಗಿ ಪರಿಶೀಲಿಸಲಾಗಿ ಒಟ್ಟು 9 ಪುಸ್ತಕಗಳು ಬಾಕಿ ಇದ್ದು ದಾಸ್ತಾನು ಲೆಕ್ಕಕ್ಕೆ ತಾಳೆ ಹೊಂದುತ್ತದೆ. 2011-12ನೇ ಸಾಲಿಗೆ ಉಪಯೋಗಿಸಿ ಮುಂದಿನ ಸಾಲಿಗೆ ಮುಂದುವರೆದು ಭಾಗಶ: ರಶೀದಿ ಪುಸ್ತಕಗಳ ವಿವರ ಈ ಕೆಳಗಿನಂತಿದೆ.

| ಪುಸ್ತಕ ಸಂಖ್ಯೆ | ರಶೀದಿ ಸಂಖ್ಯೆ | | ಷರಾ |
|---|---|---|---|
| | ಯಿಂದ | ವರೆಗೆ | |
| 81 | 8001/<br>27-12-12 | 8092/<br>30-03-12 | |

ರಶೀದಿ ಪುಸ್ತಕ ಅಂತಿಮ ಶಿಲ್ಕು ವಿವರ ರಶೀದಿ ಪುಸ್ತಕ ಸಂಖ್ಯೆ: 82ರಿಂದ 90ರವರೆಗೆ

## 15. ಸಿ.ಎ. ನಿವೇಶನ ವಿನಾಯಿತ ಶುಲ್ಕದ ಬಗ್ಗೆ:-

2011-12ನೇ ಸಾಲಿನಲ್ಲಿ ಪಾರ್ಕ್ ಮತ್ತು ಸಿ.ಎ. ನಿವೇಶನಕ್ಕೆ ವಿನಾಯಿತಿ ನೀಡಿ ಶಿಲ್ಕು ರೂ.63,24,703/- ಪಡೆದ ವಿವರವನ್ನು ಅನುಬಂಧ-3ರಲ್ಲಿ ನೀಡಲಾಗಿದೆ.

## 16) ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆಯದೆ ಕಛೇರಿಯ ಸಹಾಯಕರ ಮತ್ತು ಬೆರಳಚ್ಚುಗಾರರ ವೇತನ ಪಾವತಿ:

ದಿನಾಂಕ:21-5-2009ರಂದು ಪ್ರಾಧಿಕಾರ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಿಷಯ ಸಂಖ್ಯೆ:7ರಲ್ಲಿ ಮಡಿಕೇರಿ ಪುರ ಸಭೆ ಮಡಿಕೇರಿಯಲ್ಲಿ ದಿನಗೂಲಿ ನೌಕರರಾಗಿ ಕಾರ್ಯ ನಿರ್ವಹಿಸುತ್ತಿದ್ದ ಸದರಿಯವರಿಗೆ ವೇತನ ಶ್ರೇಣಿ 960-20-1100-38-1400-40-1760 ನಿಗಧಿಪಡಿಸಿ ಪ್ರಾಧಿಕಾರದಿಂದ ವೇತನ ಪಾವತಿಸಲು ತೀರ್ಮಾನಿಸಿದೆ. ಈ ತೀರ್ಮಾನದಂತೆ ಶ್ರೀಮತಿ ಕೆ.ಕೆ.ಜಯಂತಿಯವರನ್ನು ಗುಮಾಸ್ತೆ/ಬೆರಳಚ್ಚುಗಾರರನ್ನು ಮುಖ್ಯಾಧಿಕಾರಿ ಪುರಸಭೆ ಮಡಿಕೇರಿಯಿಂದ ಪತ್ರ ಸಂಖ್ಯೆ:ಎಂ.ಬಿ.2/28/90-91. ದಿನಾಂಕ:31-5-90ರಲ್ಲಿ ಪ್ರಾಧಿಕಾರಕ್ಕೆ ನಿಯೋಜಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ ಕ್ರಮಾಂಕ ಪನಿ 488 ಎಂ.ಎ.ಬಿ.88. ಬೆಂಗಳೂರು. ದಿನಾಂಕ:2-1-1998ರಲ್ಲಿ ಈ ಪ್ರಾಧಿಕಾರಕ್ಕೆ ದ್ವಿತೀಯ ದರ್ಜೆ ಗುಮಾಸ್ತೆ/ಬೆರಳಚ್ಚುಗಾರರನ್ನು ಹಾಗೂ ಜವಾನನನ್ನು ನಿಯೋಜನೆಗೆ ಆಧಾರದ ಮೇಲೆ ನೇಮಕಾತಿ ಮಾಡಲು ಆದೇಶ ನೀಡಿದೆ. ಆದರೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957 ನಿಯಮ 50ರಂತೆ ಖಾಯಂ ನೌಕರರನ್ನು ಮಾತ್ರ ನಿಯೋಜನೆ ಮೇಲೆಗೆ ನೇಮಕಾತಿ ಮಾಡಿಕೊಳ್ಳಬಹುದಾಗಿದ್ದು ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆಯದೆ ಪುರಸಭೆ ದಿನಗೂಲಿ ನೌಕರರಾಗಿ ಕಾರ್ಯ ನಿರ್ವಹಿಸುತ್ತಿದ್ದ ಈ ನೌಕರರನ್ನು ನಿಯೋಜನೆ ಮೇರೆ ಪ್ರಾಧಿಕಾರಕ್ಕೆ ತೆಗೆದುಕೊಂಡು ವೇತನ ಶ್ರೇಣಿ ನೀಡಲಾಗಿದೆ. ಈ ಸಾಲಿಗೆ ಅನುಬಂಧ-4ರಲ್ಲಿ ವಿವರಿಸಿರುವಂತೆ ರೂ.128364.00 ವೇತನ ಪಾವತಿಸಲಾಗಿದೆ. ಆದ್ದರಿಂದ ಸಕ್ಷಮಪ್ರಾಧಿಕಾರದಿಂದ ಮಂಜೂರಾತಿ ಪಡೆದು ಹಾಜರುಪಡಿಸುವವರೆಗೆಪಾವತಿ ರೂ.128364.00 ಆಕ್ಷೇಪಿಸಲಾಗಿದೆ.

## 17. ನಗರಾಭಿವೃದ್ಧಿ ಪ್ರಾಧಿಕಾರ ಕೈಗೊಂಡಿರುವ ಅಭಿವೃದ್ಧಿ ಯೋಜನೆಗಳ ಬಗ್ಗೆ:

ಸರ್ಕಾರದ ಆದೇಶ ದಿನಾಂಕ: 2-6-1988ರಂದು ಮಡಿಕೇರಿ ಪ್ರಾಧಿಕಾರವು ಅಸ್ತಿತ್ವಕ್ಕೆ ಬಂದಿದ್ದು ಈ ದಿನಾಂಕದಿಂದ ಇಲ್ಲಿಯವರೆಗೆ ಯಾವುದೇ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಂಡಿರುವುದಿಲ್ಲ.

## 18. ಸಿಬ್ಬಂದಿ ವೇತನ ಭತ್ಯೆಗಳ ಬಗ್ಗೆ:

ನಗರಾಭಿವೃದ್ಧಿ ಪ್ರಾಧಿಕಾರ ಮಡಿಕೇರಿ ಮಂಜೂರಾಗಿರುವ ಹುದ್ದೆಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ಹುದ್ದೆಯ ವಿವರ | ವೇತನ ಶ್ರೇಣಿ | ಮಂಜೂರಾದ ಸರ್ಕಾರಿ ಆದೇಶ ಸಂಖ್ಯೆ |
|---|---|---|---|
| 1 | ಆಯುಕ್ತರು 1 | 28100-50100 | ಸಂ:ನಅಇ.590/MIB.181TTP.88. ದಿ:2-6-1988 |
| 2 | ನಗರ ಯೋಜನಾ ಸದಸ್ಯರು 1 | ಸಹಾಯಕ ನಿರ್ದೇಶಕರು ನಗರ ಯೋಜನಾ ಇಲಾಖೆ ಮಡಿಕೇರಿ. ಈ ಹುದ್ದೆ ನಿರ್ವಹಿಸುತ್ತಿರುವುದು | ಸರ್ಕಾರಿ ಆದೇಶ ಸಂ:ನಇ/83/ನಯೋಸ/2009. ದಿ:25-6-2009. |
| 3 | ಕ್ಲರ್ಕ್ ಕಂ ಟೈಪಿಸ್ಟ್ ತಾತ್ಕಾಲಿಕ 1 | ನಗರ ಸಭೆ ಮಡಿಕೇರಿಯಿಂದ ದಿನಗೂಲಿ ನೌಕರ ಪಡೆದು ಕೆಲಸ ನಿರ್ವಹಿಸುತ್ತಿದೆ. | ಸರ್ಕಾರದ ಆದೇಶ ಸಂ:ನಅಇ.488.MIB.88. ದಿ:2-1-1989. |
| 4 | ಜವಾನ ತಾತ್ಕಾಲಿಕ 1 | -------,,-------- | ----------,,-------- |
| | | | |

## 19. ಭೌತಿಕ ದಾಸ್ತಾನು ಪರಿಶೀಲನೆ ಬಗ್ಗೆ:

ಕರ್ನಾಟಕ ಆರ್ಥಿಕ ಸಂಹಿತೆ 1958 ಅನುಚ್ಛೇದ 1969ರ ಪ್ರಕಾರ ದಾಸ್ತಾನು ವಹಿ ನಿರ್ವಹಿಸಲು ಸೂಚಿಸಿದೆ. ಪ್ರಾಧಿಕಾರದ ಸ್ವಾಧೀನದಲ್ಲಿ ಯಾವುದೇ ಸಾಮಗ್ರಿಗಳ ದಾಸ್ತಾನು ಇರುವುದಿಲ್ಲ.

## 20) ಗದ್ದಿಗೆ ಉದ್ಯಾನ ನಿರ್ಮಾಣ ಅಭಿವೃದ್ಧಿ ಕಾಮಗಾರಿಯ ಬಗ್ಗೆ:-

ರ್ಕಾಂಗೇರಿ ಗ್ರಾಮದ ಸರ್ವೇ ಸಂ.30/1ರಲ್ಲಿ 5 ಏಕರೆ ವಿಸ್ತೀರ್ಣದ ಜಮೀನಿನಲ್ಲಿ ಪ್ರಾಧಿಕಾರವು ರೂ.63.49 ಲಕ್ಷಗಳ ವೆಚ್ಚ ರಿಸಿ ಗದ್ದಿಗೆ ಉದ್ಯಾನ ನಿರ್ಮಾಣ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಿರುತ್ತದೆ.

ರ್ಕಾಂಗೇರಿ ಗ್ರಾಮದ ಸರ್ವೆ ಸಂ.30/1ರಲ್ಲಿ ರೂ.19.86 ಏಕರೆ ವಿಸ್ತೀರ್ಣ ಹೊಂದಿದ್ದು, ಸದರಿ ಜಾಗದ ಸುಮಾರು ಐದು ಏಕರೆ ಜಾಗದಲ್ಲಿ ಉದ್ಯಾನ ನಿರ್ಮಿಸಲು ಸದರಿ ಜಮೀನನ್ನು ಪ್ರಾಧಿಕಾರದ ಹಸ್ತಾಂತರಕ್ಕೆ, ಮಡಿಕೇರಿರವರು ನಿರ್ದೇಶಕರು, ಪ್ರಾಚ್ಯವಸ್ತು ಶಾಸ್ತ್ರ ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರುರವರಿಗೆ ಪತ್ರ ಬರೆದಿದ್ದು, ಸದರಿ ಜಾಗವು ರಕ್ಷಿತ ಪ್ರದೇಶ & ನಿರ್ಭಂದಿತ ಪ್ರದೇಶವಾಗಿರುವುದರಿಂದ ಹಸ್ತಾಂತರಿಸಲು ಸಾಧ್ಯವಿರುವುದಿಲ್ಲವೆಂದು ಹಾಗೂ ಸದರಿ ಜಾಗದಲ್ಲಿ ಉದ್ಯಾನವನ ಅಭಿವೃದ್ಧಿ & ಮೂಲಭೂತ ಸೌಕರ್ಯವನ್ನು ಕೈಗೊಳ್ಳಲು ಇಲಾಖೆಯ ಅಭ್ಯಂತರವಿರುವುದಿಲ್ಲವೆಂದು ಪತ್ರ ಸಂಖ್ಯೆ:ಡಿಎಂಎಂ:ಎಸಿಟಿ:6:253:2010-11 ದಿನಾಂಕ:-24-03-11ರಲ್ಲಿ ತಿಳಿಸಿರುತ್ತಾರೆ.

ಮಡಿಕೇರಿ ನಗರವು ಬೆಟ್ಟಗುಡ್ಡಗಳಿಂದ ಕೂಡಿದ್ದು, ದಿನಾಂಕ:-24-08-2010ರಲ್ಲಿ ನಡೆದ ಸರ್ಕಾರದ ಸಭೆಯಲ್ಲಿ ನಗರಾಭಿವೃದ್ಧಿ ಸಚಿವರು ಲಭ್ಯವಿರುವ ಜಾಗದಲ್ಲಿ ಕಡೆಯ ಪಕ್ಷ ಒಂದಾದರೂ ಉದ್ಯಾನವನ ನಿರ್ಮಿಸಲು ನಿರ್ದೇಶನ ನೀಡಿರುವುದಾಗಿ ಮಾಹಿತಿ ನೀಡಿರುತ್ತಾರೆ. ಆದರೆ ಈ ಬಗ್ಗೆ ಯಾವುದೇ ಸೂಕ್ತ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ ಹಾಗೂ ಸದರಿ ಜಾಗದಲ್ಲಿ ಉದ್ಯಾನವನ ನಿರ್ಮಿಸಲು ಅನುಮತಿ ನೀಡಬೇಕೆಂದು ಸರ್ಕಾರದ ಕಾರ್ಯದರ್ಶಿ ಗಳು,

ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಕಾಸ ಸೌಧ, ಬೆಂಗಳೂರುರವರನ್ನು ಪತ್ರ ಸಂಖ್ಯೆ:ಮನಪ್ರಾ:ಉದ್ಯಾಅಭಿ:2011-12 ದಿನಾಂಕ:-27-05-2011ರಲ್ಲಿ ಕೋರಿ ಪತ್ರ ಬರೆದಿರುತ್ತಾರೆ. ಆದರೆ ಸರ್ಕಾರದಿಂದ ಅನುಮತಿ ಪಡೆದ ಬಗ್ಗೆ ಯಾವುದೇ ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿದಲ್ಲಿ ಈ ಉದ್ಯಾನವನವನ್ನು ಸಾರ್ವಜನಿಕ ಹಿತದೃಷ್ಠಿಯಿಂದ ಅಭಿವೃದ್ಧಿ ಪಡಿಸಿರುವುದಾಗಿ ತಿಳಿದುಬಂದಿರುತ್ತದೆ.

## 21. ಸಾಮಾನ್ಯ ಅಭಿಪ್ರಾಯ:

ಹಿಂದಿನ ಸಾಲುಗಳ ಆಡಿಟ್ ವರದಿಗಳಿಗೆ ಅನುಸರಣಾ ವರದಿ ಸಲ್ಲಿಸಲು ಕ್ರಮ ವಹಿಸಬೇಕಾಗಿರುತ್ತದೆ. ಸಾರ್ವಜನಿಕರಿಗೆ ಅನುಕೂಲವಾಗುವಂತಹ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಕ್ರಿಯಾ ಯೋಜನೆಯನ್ನು ತಯಾರಿಸಿಕೊಳ್ಳಬೇಕಾಗಿರುತ್ತದೆ. ನಗರಾಭಿವೃದ್ಧಿ ಪ್ರಾಧಿಕಾರ ಸ್ಥಾಪನೆಯ ಮೂಲ ಉದ್ದೇಶ ಪ್ರಮುಖ ನಗರ ಪ್ರದೇಶಗಳ ಯೋಜನಾಬದ್ಧ ಅಭಿವೃದ್ಧಿಯಾಗಿರುತ್ತದೆ. ಪ್ರಾಧಿಕಾರ ಆರಂಭಗೊಂಡಿನಿಂದ ಇದುವರೆವಿಗೂ ಯಾವುದೇ ಅಭಿವೃದ್ಧಿ ಯೋಜನೆ ಕೈಗೊಳ್ಳದಿರುವುದು ಮೂಲ ಉದ್ದೇಶವೇ ಈಡೇರಿದಂತಿಲ್ಲ. ಆದ್ದರಿಂದ ಈ ಬಗ್ಗೆ ಕ್ರಮ ವಹಿಸುವುದು.

ಸಹಾಯಕ ನಿಯಂತ್ರಕರು,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ಮಡಿಕೇರಿ.

## ಅನುಬಂಧ - 1 (ಕಂಡಿಕೆ-7)

## 2011-12ನೇ ಸಾಲಿನ ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಜಮಾ ಮತ್ತು ಖರ್ಚಿನ ವಿವರ

| ಕ್ರ.ಸಂ | ಜಮಾ ವಿವರ | ಮೊಬಲಗು | ಖರ್ಚಿನ ವಿವರ | ಮೊಬಲಗು |
|---|---|---|---|---|
| 1 | ಪರಿಶೀಲನಾ ಶುಲ್ಕ | 287382 | ಅಧ್ಯಕ್ಷರ ಗೌರವಧನ ಮತ್ತು ಇತರೆ ಭತ್ಯೆಗಳು | 285384 |
| 2 | ಕೆ.ಟಿ.ಸಿ.ಪಿ. ಕಾಯ್ದೆ 18ರಡಿ ಶುಲ್ಕ | 902931 | ಆಯುಕ್ತರ ವೇತನ ಮತ್ತು ಇತರೆ ಭತ್ಯೆಗಳು | 316698 |
| 3 | ಪತ್ರಿಕಾ ಪ್ರಕಟಣೆ ಶುಲ್ಕ | 140000 | ಸಿಬ್ಬಂದಿ ವೇತನ | 248364 |
| 4 | ಪಾರ್ಕ್ ಮತ್ತು ಸಿ.ಎ. ನಿವೇಶನಕ್ಕೆ ವಿನಾಯಿತಿ ಶುಲ್ಕ | 6324703 | ಕಂಪ್ಯೂಟರ್ ಖರೀದಿ ಮತ್ತು ವೆಬ್ ಸೈಟ್ ಅಳವಡಿಕೆ ವೆಚ್ಚ | 152966 |
| 5 | ಬ್ಯಾಂಕ್ ಬಡ್ಡಿ | 185167 | ವಿದ್ಯುಚ್ಛಕ್ತಿ, ದುರಸ್ತಿ & ಬಿಲ್ ಪಾವತಿ ವೆಚ್ಚ | 9938 |
| 6 | ಇತರೆ ಮೂಲಗಳಿಂದ ಬಂದಿರುವ ಶುಲ್ಕ | 3036 | ಮಹಾ ಯೋಜನೆಯ ತಯಾರಿಕೆ ವೆಚ್ಚ | 19008 |
| 7 | ಠೇವಣಿ ಫಲಪ್ರದಗೊಂಡಿರುವುದು | 4687705 | ದೂರವಾಣಿ ವೆಚ್ಚ | 24458 |
| 8 | ಟೆಂಡರ್ ಸಲ್ಲಿಸಲು ಅರ್ಜಿ ಶುಲ್ಕ ಮತ್ತು ಠೇವಣಿ ಶುಲ್ಕ | 174040 | ವಾಹನ ಬಾಡಿಗೆ ಮತ್ತು ಇಂಧನ ವೆಚ್ಚ | 103732 |
| 9 | ದಂಡ ಶುಲ್ಕ | 100000 | ಸ್ಟೇಷನರಿ ಖರೀದಿ & ಕಛೇರಿ ಸಾದಿಲ್ವಾರು ವೆಚ್ಚ | 15452 |
| 10 | | | ಪೀಠೋಪಕರಣಗಳ ಖರೀದಿ | 136261 |
| 11 | | | ಪತ್ರಿಕಾ ಪ್ರಕಟಣೆ ವೆಚ್ಚ | 118394 |
| 12 | | | ಆಯುಕ್ತರ ಪ್ರಯಾಣ ಭತ್ಯೆ ಬಿಲ್ ಪಾವತಿ | 8070 |
| 13 | | | ಇತರೆ ವೆಚ್ಚ | 328 |
| 14 | | | ಮುದ್ರಣ ವೆಚ್ಚ | 15500 |
| 15 | | | ರಾಷ್ಟ್ರೀಯ ಹಬ್ಬಕ್ಕೆ ವಂತಿಕೆ ನೀಡಿರುವುದು | 6000 |
| 16 | | | ಅಂಚೆ ಚೀಟಿ ಖರೀದಿ | 2500 |
| 17 | | | ಲೆಕ್ಕ ಪರಿಶೋಧನಾ ಶುಲ್ಕ ಪಾವತಿ | 16139 |
| 18 | | | ರಾಜಧನ+ಟಿ.ಡಿ.ಎಸ್. ಪಾವತಿ+ಇನ್ ಕಮ್ ಟ್ಯಾಕ್ಸ್+ಸೇಲ್ ಟ್ಯಾಕ್ಸ್ ಪಾವತಿ | 422419 |
| 19 | | | ವಕೀಲರ ಶುಲ್ಕ | 1000 |
| 20 | | | ಸಭಾ ಉಪಹಾರ ವೆಚ್ಚ | 2820 |
| | | | ಕಛೇರಿ ಕಟ್ಟಡದ ಶೌಚಾಲಯ ದುರಸ್ತಿ | 2000 |
| | | | ಠೇವಣಿ ಇಟ್ಟಿರುವುದು | 4012119 |
| | | | ದಿನಪತ್ರಿಕೆ ವೆಚ್ಚ | 2220 |
| | | | ಗದ್ದಿಗೆ ಉದ್ಯಾನವನ ನಿರ್ಮಾಣ ಅಭಿವೃದ್ಧಿ ಕಾಮಗಾರಿ | 6349634 |
| | ಒಟ್ಟು ಜಮಾ | 12804964 | ಒಟ್ಟು ವೆಚ್ಚ | 12271404 |
| | ಆರಂಭ ಶಿಲ್ಕು | 724104 | ಅಂತಿಮ ಶಿಲ್ಕು | 1257664 |
| | ಜುಮ್ಲಾ | 13529068 | ಜುಮ್ಲಾ | 13529068 |

ಸಹಾಯಕ ನಿಯಂತ್ರಕರು
[illegible]

ಅನುಬಂಧ-2 (ಕಂಡಿಕೆ-11)

## 2011-12ನೇ ಸಾಲಿನಲ್ಲಿ ಹೂಡಿಕೆ ವಿವರ (ಇಂಡಿಯನ್ ಬ್ಯಾಂಕ್)

### (ಇಂಡಿಯನ್ ಬ್ಯಾಂಕ್)

| ಕ್ರಮ ಸಂಖ್ಯೆ | ಠೇವಣಿ ಇಟ್ಟಿರುವ ದಿನಾಂಕ | ಸರ್ಟಿಫಿಕೇಟ್ ನಂ | ಠೇವಣಿ ಇಟ್ಟ ಮೊಬಲಗು | ಠೇವಣಿ ಫಲಪ್ರದಗೊಳ್ಳುವ ದಿನಾಂಕ | ಠೇವಣಿ ಫಲಪ್ರದಗೊಂಡಾಗ ಆಗುವ ಮೊಬಲಗು |
|---|---|---|---|---|---|
| 1 | 17-03-2011 | 175160 | 169498 | 22-09-2012 | 195366 |
| 2 | 24-09-2011 | 595737 | 1374173 | 24-09-2012 | 1504529 |
| 3 | 14-10-2011 | 175347 | 1012119 | 14-10-2012 | 1111750 |
| | | ಒಟ್ಟು | 2555790 | | 2811645 |

### (ಕಾರ್ಪೋರೇಷನ್ ಬ್ಯಾಂಕ್)

| ಕ್ರಮ ಸಂಖ್ಯೆ | ಠೇವಣಿ ಇಟ್ಟಿರುವ ದಿನಾಂಕ | ಸರ್ಟಿಫಿಕೇಟ್ ನಂ | ಠೇವಣಿ ಇಟ್ಟ ಮೊಬಲಗು | ಠೇವಣಿ ಫಲಪ್ರದಗೊಳ್ಳುವ ದಿನಾಂಕ | ಠೇವಣಿ ಫಲಪ್ರದಗೊಂಡಾಗ ಆಗುವ ಮೊಬಲಗು |
|---|---|---|---|---|---|
| 1 | 11-03-2012 | 235176 | 1013461 | 11/3/2012 | 1115945 |

### (ಯುಕೋ ಬ್ಯಾಂಕ್)

| ಕ್ರಮ ಸಂಖ್ಯೆ | ಠೇವಣಿ ಇಟ್ಟಿರುವ ದಿನಾಂಕ | ಸರ್ಟಿಫಿಕೇಟ್ ನಂ | ಠೇವಣಿ ಇಟ್ಟ ಮೊಬಲಗು | ಠೇವಣಿ ಫಲಪ್ರದಗೊಳ್ಳುವ ದಿನಾಂಕ | ಠೇವಣಿ ಫಲಪ್ರದಗೊಂಡಾಗ ಆಗುವ ಮೊಬಲಗು |
|---|---|---|---|---|---|
| 1 | 05-01-2011 | 131489 | 1500000 | 5/1/2013 | 1783501 |
| 2 | 14-03-2011 | 113997 | 1077136 | 14-09-2012 | 1244584 |
| 3 | 14-03-2011 | 113998 | 1000000 | 14-09-2012 | 1155457 |
| 4 | 17-03-2012 | 131655 | 1000000 | 17-03-2013 | 1101123 |
| 5 | 17-03-2012 | 143673 | 541572 | 17-03-2013 | 596337 |
| | | ಒಟ್ಟು:- | 5118708 | | 5881002 |
| | | ಜುಮ್ಲಾ | 8687959 | | 9808592 |

ಸಹಾಯಕ ನಿಯಂತ್ರಕರು,
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,
ಮಡಿಕೇರಿ.

ಅನುಬಂಧ-3 (ಕಂಡಿಕೆ-15)

## 2011-12ನೇ ಸಾಲಿನ ಪಾರ್ಕ್ ಮತ್ತು ಸಿ.ಎ. ನಿವೇಶನಕ್ಕೆ ವಿನಾಯಿತಿ ಶುಲ್ಕ.

| ಕ್ರ.ಸಂ | ವಿನ್ಯಾಸದ ಭೂ ಮಾಲೀಕರು | ಗ್ರಾಮ, ಸರ್ವೆ ನಂಬರ್ ಮತ್ತು ವಿಸ್ತೀರ್ಣ | ಪಾರ್ಕ್ ಮತ್ತು ಸಿ.ಎ.ನಿವೇಶನಕ್ಕೆ ಕಾದಿರಿಸಿರುವ ಜಾಗದ ವಿಸ್ತೀರ್ಣ | ಉಪನೋಂದಣಾಧಿಕಾರಿಯವರು ನಿಗಧಿಪಡಿಸಿರುವ ದರ (ಸೆಂಟ್ 1ಕ್ಕೆ) | ಪಾರ್ಕ್ ಮತ್ತು ಸಿ.ಎ. ನಿವೇಶನಕ್ಕೆ ವಿನಾಯಿತಿ ನೀಡಿ ಭರಿಸಿಕೊಂಡಿರುವ ಶುಲ್ಕ | ಪರಿಶೀಲನಾ ಶುಲ್ಕ | ಒಟ್ಟು ಶುಲ್ಕ |
|---|---|---|---|---|---|---|---|
| 1 | ಶ್ರೀಮತಿ ಅಶ್ವಿನಿ ಕೃಷ್ಣ | ಕೆ.ಬಾಡಗ ಗ್ರಾಮದ ಸರ್ವೆ ನಂ.99ರಲ್ಲಿನ 0.95ಎಕರೆ. | 1183ಚ.ಮೀ (29.24ಸೆಂಟ್) | 75,000.00 | 21,93,000.00 | 490.00 | 21,93,490.00 |
| 2 | ಶ್ರೀಮತಿ ಕೃಷ್ಣವೇಣಿ ಪ್ರಸಾದ್ | ಕೆ.ಬಾಡಗ ಗ್ರಾಮ, ಸರ್ವೆ ನಂ. 99, 0.91ಎಕರೆ. | 599.5ಚ.ಮೀ (14.81ಸೆಂಟ್ಸ್). | 75,000.00 | 11,10,750.00 | 462.00 | 11,11,212.00 |
| 3 | ಶ್ರೀ ಎಂ.ಕೇಶವ ಪ್ರಸಾದ್ | ಕೆ.ಬಾಡಗ ಗ್ರಾಮ, ಸರ್ವೆ ನಂ. 99, 0.82ಎಕರೆ. | 924.88ಚ.ಮೀ. (22.85 ಸೆಂಟ್ಸ್) | 75,000.00 | 17,13,750.00 | 425.00 | 17,14,175.00 |
| 4 | ಶ್ರೀ ಎಂ.ಕೃಷ್ಣ ನಾರಾಯಣ | ಕೆ.ಬಾಡಗ ಗ್ರಾಮ, ಸರ್ವೆ ನಂ. 99, 0.82ಎಕರೆ. | 674.28ಚ.ಮೀ (16.66ಸೆಂಟ್ಸ್) | 75,000.00 | 12,49,901.00 | 425.00 | 12,50,326.00 |
| 5 | ಶ್ರೀ ಎನ್.ಜೆಚ್. ಪದ್ಮನಾಭ | ಕರ್ಣಂಗೇರಿ ಗ್ರಾಮದ ಸರ್ವೆ ನಂ.461/8, 0.05ಎಕರೆ. | 0.37ಸೆಂಟು | 75,000.00 | 27,500.00 | 250.00 | 27,750.00 |
| 6 | ಶ್ರೀ ವೈ.ಎನ್.ಚಂಗಪ್ಪ | ಕರ್ಣಂಗೇರಿ ಗ್ರಾಮದ ಸರ್ವೆ ನಂ.461/9, 0.05ಎಕರೆ | 0.37ಸೆಂಟು | 75,000.00 | 27,500.00 | 250.00 | 27,750.00 |
| | | | | ಒಟ್ಟು | 63,22,401.00 | 2,302.00 | 63,24,703.00 |

ಸಹಾಯಕ ನಿಯಂತ್ರಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ.
ಮಡಿಕೇರಿ.

| | | |
|---|---|---|
| | ಒಟ್ಟು ರೂ. | 128364 |

ಸಹಾಯಕ ನಿಯಂತ್ರಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ಮಡಿಕೇರಿ.

ಅನುಬಂಧ - 4 (ಕಂಡಿಕೆ - 16)

**ಶ್ರೀಮತಿ. ಕೆ.ಕೆ. ಜಯಂತಿ, ಕ್ಲರ್ಕ್ ಕಂ ಟೈಪಿಸ್ಟ್ ಇವರಿಗೆ 2011-12ನೇ ಸಾಲಿಗೆ ಪಾವತಿಸಿರುವ ವೇತನದ ವಿವರ**

| ಕ್ರ.ಸಂ. | ತಿಂಗಳು | ಪಾವತಿಸಿರುವ ವೇತನ (ರೂ.) |
|---|---|---|
| 1 | ಮಾರ್ಚ್ 2011 | 9719 |
| 2 | ತುಟ್ಟಿ ಭತ್ಯೆ ವ್ಯತ್ಯಾಸ | 1026 |
| 3 | ಏಪ್ರಿಲ್ 2011 | 10081 |
| 4 | ಮೇ 2011 | 10081 |
| 5 | ಜೂನ್ 2011 | 10081 |
| 6 | ಜುಲೈ 2011 | 10081 |
| 7 | ಆಗಸ್ಟ್ 2011 | 10081 |
| 8 | ಸೆಪ್ಟೆಂಬರ್ 2011 | 10081 |
| 9 | ತುಟ್ಟಿ ಭತ್ಯೆ ವ್ಯತ್ಯಾಸ | 1218 |
| 10 | ಅಕ್ಟೋಬರ್ 2011 | 10487 |
| 11 | ನವೆಂಬರ್ 2011 | 11357 |
| 12 | ಡಿಸೆಂಬರ್ 2011 | 11357 |
| 13 | ಜನವರಿ 2012 | 11357 |
| 14 | ಫೆಬ್ರವರಿ 2012 | 11357 |
| | ಒಟ್ಟು ರೂ. | 128364 |

ಸಹಾಯಕ ನಿಯಂತ್ರಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ಮಡಿಕೇರಿ.